**ಕರ್ನಾಟಕ ಸರ್ಕಾರದ ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ ಬೆಂಗಳೂರು-1**

ಸಂಖ್ಯೆ:-ಸಿ4(3).ಹೆಲ್ತ್ ಕ್ಲಬ್ 01/10-11 ದಿನಾಂಕ:-21-08-2010.

**ಸುತ್ತೋಲೆ**

ವಿಷಯ: ಪ್ರೌಢಶಾಲೆಗಳಲ್ಲಿ **ಆರೋಗ್ಯ ಕೂಟ** (Health Club) ಸ್ಥಾಪಿಸುವ ಬಗ್ಗೆ..

ಉಲ್ಲೇಖ 01: ಸನ್ಮಾನ್ಯ ಶಿಕ್ಷಣ ಸಚಿವರ ಟಿಪ್ಪಣಿ ಸಂಖ್ಯೆ:ಪ್ರಾ.ಪ್ರೌ.ಶಿ.ಸ 4908/10, ದಿನಾಂಕ 11.08.2010

02. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇವರ ಅ.ಸ. ಪತ್ರ ಸಂಖ್ಯೆ: ಸಪ್ರಕಾ/:ಪ್ರಾ.ಪ್ರೌ.ಶಿ/ಆಶಾ/309/2010 ದಿನಾಂಕ: 13.08.2010

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರೌಢಶಾಲೆಗಳ ವಿದ್ಯಾರ್ಥಿಗಳಲ್ಲಿ ಉತ್ತಮ ಹವ್ಯಾಸ ಹಾಗೂ ಆರೋಗ್ಯಕರ ಜೀವನದ ಬಗ್ಗೆ ಅರಿವು ಉಂಟು ಮಾಡುವ ಸಲುವಾಗಿ ಪ್ರತೀ ಪ್ರೌಢಶಾಲೆಯಲ್ಲಿ ಈ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ **ಆರೋಗ್ಯ ಕೂಟ**ವನ್ನು ಸ್ಥಾಪಿಸಿ, ಸದರಿ ಕೂಟಕ್ಕೆ ವಿಜ್ಞಾನ ಶಿಕ್ಷಕರನ್ನು ಅಧ್ಯಕ್ಷರನ್ನಾಗಿ, ದೈಹಿಕ ಶಿಕ್ಷಕರನ್ನು ಕಾರ್ಯದರ್ಶಿಯನ್ನಾಗಿ, ನೇಮಕ ಮಾಡಿ ಪ್ರತೀ ಶಾಲೆಗೆ ಒಬ್ಬ ನೋಡಲ್ ವೈದ್ಯರನ್ನು ಗುರುತಿಸಿ, ಅವರಿಂದ ಹಾಗೂ ತಜ್ಞರಿಂದ ವಿದ್ಯಾರ್ಥಿಗಳಿಗೆ ಉಪನ್ಯಾಸ, ವಿವಿಧ ಸ್ಪರ್ಧೆ ಹಾಗೂ ಲೇಖನಗಳನ್ನು ಪ್ರಕಟಿಸುವುದು ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಮಾನ್ಯ ಶಿಕ್ಷಣ ಸಚಿವರು ಉಲ್ಲೇಖಿತ (1)ರ ಪತ್ರದಲ್ಲಿ ಸೂಚಿಸಿರುತ್ತಾರೆ. ಈ ಬಗ್ಗೆ ಜರೂರಾಗಿ ಕ್ರಮ ಕೈಗೊಂಡು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಉಲ್ಲೇಖ (2)ರ ಪತ್ರದಲ್ಲಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ ಇವರು ಸೂಚಿಸಿರುತ್ತಾರೆ.

ಆದುದರಿಂದ, ನಿಮ್ಮ ಆಡಳಿತ ವ್ಯಾಪ್ತಿ ಅಡಿಯಲ್ಲಿ ಬರುವ ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಪ್ರತೀ ಪ್ರೌಢಶಾಲೆಯಲ್ಲಿ 30.09.2010ರಿಂದಲೇ ಜಾರಿಗೆ ಬರುವಂತೆ **ಆರೋಗ್ಯ ಕೂಟ**ವನ್ನು (Health Club) ಸ್ಥಾಪಿಸಿ, ಸದರಿ ಆರೋಗ್ಯಕೂಟಕ್ಕೆ ವಿಜ್ಞಾನ ಶಿಕ್ಷಕರನ್ನು ಅಧ್ಯಕ್ಷರನ್ನಾಗಿ, ದೈಹಿಕ ಶಿಕ್ಷಕರನ್ನು ಕಾರ್ಯದರ್ಶಿಯನ್ನಾಗಿ ಮತ್ತು ಪ್ರತಿ ತರಗತಿಯಿಂದ ಕನಿಷ್ಠ 3 ವಿದ್ಯಾರ್ಥಿಗಳನ್ನು ಸದಸ್ಯರನ್ನಾಗಿ (ಪ್ರತಿ ತರಗತಿಯಿಂದ ಒಬ್ಬ ವಿದ್ಯಾರ್ಥಿನಿ ಇರುವುದು ಕಡ್ಡಾಯ) ನೇಮಿಸಲು ಕ್ರಮ ಕೈಗೊಳ್ಳುವುದು.

ಈ ಸಂಬಂಧ ಆರೋಗ್ಯ ಇಲಾಖೆಯವರನ್ನು ಸಂಪರ್ಕಿಸಿ ಪ್ರತೀ ಪ್ರೌಢಶಾಲೆಗೆ ಒಬ್ಬರಂತೆ ನೋಡಲ್ ವೈದ್ಯರನ್ನಾಗಿ ಗುರುತಿಸುವುದು. ಹಾಗೂ ಆರೋಗ್ಯಕೂಟದ ವತಿಯಿಂದ ಪ್ರತಿ ತಿಂಗಳು ದೈಹಿಕ, ಮಾನಸಿಕ, ಆರೋಗ್ಯ, ಉತ್ತಮ ಹವ್ಯಾಸ ಇತ್ಯಾದಿ ವಿಷಯಗಳ ಬಗ್ಗೆ ಮಾನಸಿಕತಜ್ಞರಿಂದ ಉಪನ್ಯಾಸ, ಹಾಗೂ ಈ ಬಗ್ಗೆ ಮಕ್ಕಳಿಂದ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲು ಮತ್ತು ಈ ವಿಷಯಗಳ ಬಗ್ಗೆ ಲೇಖನಗಳನ್ನು ಪ್ರಕಟಿಸಲು ಕೂಡಲೇ ಕ್ರಮ ಕೈಗೊಂಡು ತಪ್ಪದೇ ಈ ಕಛೇರಿಗೆ ವರದಿ ಮಾಡಲು ತಿಳಿಸಿದೆ.

(ಕೆ.ಆರ್. ಶಶಿಧರ) 21/8/10

ಆಯುಕ್ತರು,

ಸಾರ್ವಜನಿಕ ಶಿಕ್ಷಣ ಇಲಾಖೆ,

ಬೆಂಗಳೂರು.

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ತುರ್ತು ಕ್ರಮಕ್ಕಾಗಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು - 1, ಇವರ ಮಾಹಿತಿಗಾಗಿ ಸಲ್ಲಿಸಿದೆ.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಮಾಹಿತಿಗಾಗಿ.
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಗುಲ್ಬರ್ಗ ಇವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
5. ರಾಜ್ಯದ ಎಲ್ಲಾ ಜಿಲ್ಲಾ ಆರೋಗ್ಯಾಧಿಕಾರಿಗಳ ಮಾಹಿತಿಗಾಗಿ.
6. ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
7. ಕಛೇರಿ ಪ್ರತಿ.

D:\Mamatha\m7.doc